Prepp
Your Personal Exams Guide

| | |
|---|---|
| Test Paper : **I** | Test Booklet Serial No. : ______ |
| Test Subject : **GENERAL PAPER** | OMR Sheet No. : ______ |
| Test Subject Code : **K-0013** | Roll No. ______ (Figures as per admission card) |
| Test booklet Code : **W** | |

**Name & Signature of Invigilator/s**

Signature: ______________________ Signature: ______________________

Name : ______________________ Name : ______________________

**Paper : I**

**Subject : GENERAL PAPER**

Time : 1 Hour 15 Minutes Maximum Marks : 100

Number of Pages in this Booklet : **24** Number of Questions in this Booklet : **60**

## ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು (60) ಅರುವತ್ತು ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ. ಇವುಗಳಲ್ಲಿನ ಯಾವುದಾದರೂ 50 (ಐವತ್ತು) ಪ್ರಶ್ನೆಗಳನ್ನು ಅಭ್ಯರ್ಥಿಯು ಉತ್ತರಿಸಬೇಕಾಗಿದೆ. ಅಭ್ಯರ್ಥಿಯು 50 ಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಉತ್ತರಿಸಿದ ಪಕ್ಷದಲ್ಲಿ, ಅಭ್ಯರ್ಥಿಯು ಉತ್ತರಿಸಿದ ಮೊದಲ ಐವತ್ತು ಪ್ರಶ್ನೆಗಳ ಮೌಲ್ಯಮಾಪನ ಮಾಡಲಾಗುತ್ತದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ <u>**ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ**</u>.
   i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆ ಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ , ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರಿತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   ಉದಾಹರಣೆ : (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು. OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು .
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು , ಸಂಗತವಾದ ಸ್ಥಳ ಹೊರತು ಪಡಿಸಿ, ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ .**

## Instructions for the Candidates

1. Write your roll number in the space provided on the top of this page.
2. This paper consists of sixty(60) multiple-choice type of questions, out of which the candidate would be required to answer any fifty (50) questions. In the event of the candidate attempting more than fifty questions, the first fifty questions attempted by the candidate would be evaluated.
3. At the commencement of examination, the question booklet will be given to you. In the first 5 minutes, you are requested <u>**to open the booklet and compulsorily examine it as below**</u> :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside this Booklet, which is common for both Paper I and Paper II.** If you mark at any place other than in the ovals, the OMR Answer Sheet will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**

www.prepp.in

Prepp
Your Personal Exams Guide

Total Number of Pages : 24

# ಜನರಲ್ ಪೇಪರ್

## ಪೇಪರ್ – I

**ಗಮನಿಸಿ :** ಈ ಪತ್ರಿಕೆಯು **(60) ಅರುವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ.

ಅಭ್ಯರ್ಥಿಗಳು ಯಾವುದಾದರೂ **(50) ಐವತ್ತು** ಪ್ರಶ್ನೆಗಳನ್ನು ಮಾತ್ರ ಉತ್ತರಿಸಬೇಕು.

ಒಂದು ವೇಳೆ **(50) ಐವತ್ತು** ಪ್ರಶ್ನೆಗಳಿಗಿಂತ ಹೆಚ್ಚಿಗೆ ಪ್ರಶ್ನೆಗಳನ್ನು ಉತ್ತರಿಸಿದಲ್ಲಿ, ಮೊದಲ **(50) ಐವತ್ತು** ಪ್ರಶ್ನೆಗಳಿಗೆ ಮಾತ್ರ ಮೌಲ್ಯಮಾಪನ ಮಾಡಲಾಗುವುದು.

ಕೆಳಗಿನ ಪ್ಯಾಸೇಜನ್ನು ಲಕ್ಷ್ಯವಿಟ್ಟು ಓದಿ, **1** ರಿಂದ **6** ರ ವರೆಗಿನ ಪ್ರಶ್ನೆ ಉತ್ತರಿಸಿ.

ಸಮಾನ ಆಸಕ್ತಿ ಇರುವ, ಅವರ ಆಸಕ್ತಿಯ ವಿಷಯದ ಬಗ್ಗೆ ತಮ್ಮ ಸಂಯುಕ್ತ ಜ್ಞಾನದ ಪರಿಣಾಮಕಾರಿ ಉಪಯೋಗ ಮಾಡಲು ಪ್ರಯತ್ನಿಸುವ ಮತ್ತು ಈ ಪ್ರಕ್ರಿಯೆಯಲ್ಲಿ ಈ ಜ್ಞಾನಕ್ಕೆ ಕೊಡುಗೆ ನೀಡುವ ಔಪಚಾರಿಕ ಗುಂಪೇ ಒಂದು ಅರಿವು (ಜ್ಞಾನ) ಸಮಾಜ. ಈ ಅರ್ಥದಲ್ಲಿ ಜ್ಞಾನವು, ಮನಶ್ಶಾಸ್ತ್ರೀಯ ಮತ್ತು ಗ್ರಹಿಕೆ, ಕಲಿಕೆ ಮತ್ತು ತಾರ್ಕಿಕ ಕ್ರಿಯೆಯ ಉಪಯುಕ್ತ ಫಲಿತಾಂಶವಾಗಿದೆ.

ಯಾವುದೇ ಚಟುವಟಿಕೆಯು, ನಿರ್ದಿಷ್ಟವಾಗಿ ಆರ್ಥಿಕ ಚಟುವಟಿಕೆಗಳ ಪ್ರಮುಖ ಅಂಶವನ್ನು ಅರಿವು ರೂಪಿಸುತ್ತದೆ ಎಂಬ ಲಕ್ಷಣವನ್ನು ಅರಿವು ಸಮಾಜಗಳು ಹೊಂದಿವೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಎಲ್ಲ ಇತರ ಮಾನವ ಚಟುವಟಿಕೆಗಳು ದೊಡ್ಡ ಗಾತ್ರದ ಅರಿವು ಮತ್ತು ಮಾಹಿತಿಯನ್ನು ಅವಲಂಬಿಸಿದೆ. ಅರಿವು, ಪ್ರಧಾನ ಉತ್ಪನ್ನ ಮತ್ತು ಕಚ್ಚಾ ವಸ್ತುವಾಗಿ ಬಿಡುವ ಸಮಾಜವೇ ಅರಿವು ಸಮಾಜ ಅಥವಾ ಅರ್ಥ ವ್ಯವಸ್ಥೆ ಆಗಿದೆ.

ಅರಿವು ಸಮಾಜಗಳು ಹೊಸ ಸಂಗತಿಗಳೇನಲ್ಲ. ಉದಾಹರಣೆಗೆ ಬೆಸ್ತರು ಬಹಳ ವರ್ಷಗಳಿಂದ ಹವಾಮಾನದ ಬಗ್ಗೆ ಮುನ್ಸೂಚನೆ ಕೊಡುವ ಅರಿವು ತಮ್ಮ ಸಮುದಾಯದೊಂದಿಗೆ ಹಂಚಿಕೊಳ್ಳುತ್ತಿದ್ದರು ಮತ್ತು ಈ ಅರಿವು ಸಮುದಾಯದ ಸಾಮಾಜಿಕ ಕೇಂದ್ರಕ್ಕೆ ಸೇರಿಕೊಳ್ಳುತ್ತಿತ್ತು. ಚಾಲ್ತಿಯ ತಂತ್ರಜ್ಞಾನಗಳು ಹೊಸತು ಅಷ್ಟೆ. ಭೌಗೋಳಿಕ ಸಾಮಿಪ್ಯದಿಂದ ಅರಿವು ಸಮಾಜಗಳು ನಿರ್ಬಂಧಕ್ಕೆ ಒಳಗಾಗಬೇಕಾಗಿಲ್ಲ. ಈಗಿನ ತಂತ್ರಜ್ಞಾನವು ಹಂಚಿಕೊಳ್ಳುವ, ದಾಖಲಿಸುವ ಮತ್ತು ಪುನಃ ಗಳಿಸುವ ಇನ್ನೂ ಹೆಚ್ಚಿನ ಸಾಧ್ಯತೆಗಳನ್ನು ನೀಡುತ್ತದೆ. ಈ ಯುಗದಲ್ಲಿ ಅರಿವು ಅತಿ ಮುಖ್ಯವಾದ ಕೇಂದ್ರವಾಗಿದೆ. ಮತ್ತು ಯಾವುದೇ ಸಮಾಜದ ಯಶಸ್ಸು ಅದನ್ನು ಚಾಲಕಶಕ್ತಿಯಾಗಿ ಬಳಸುವುದರಲ್ಲಿ ಅಡಗಿದೆ.

ಅರಿವು ಮತ್ತು ಮಾಹಿತಿಗಳು ಯಾವುದೇ ಸಮಾಜ ನಿರ್ಮಾಣದ ಅತಿ ಮುಖ್ಯ ಘಟಕಗಳಾಗಿವೆ. ಏಕೆಂದರೆ ಕೆಲವು ಹಂಚಿಕೊಂಡ ಕಲ್ಪನೆಗಳ ಸುತ್ತ ಪ್ರತಿಯೊಂದು ಸಮಾಜ ರೂಪುಗೊಂಡಿದೆ. ಜಾಗತೀಕರಣದ ಮತ್ತು ಹೊಸ ಐಸಿಟಿಯ ಕೊಡುಗೆಗಳಲ್ಲಿ ಒಂದು ಯಾವುದೆಂದರೆ ವಿಷಯಗಳ ಮತ್ತು ಸಾಧ್ಯತೆಗಳ ಹಂಚಿಕೊಂಡ ಅರಿವಿನೊಂದಿಗೆ ಜಾಗತಿಕ ಸಮಾಜ ನಿರ್ಮಾಣ.

ಇದೇ ರೀತಿಯಲ್ಲಿ ಸಂಪತ್ತಿನ ಅಸಮಾನ ವಿತರಣೆಯು ಅಸಮತೋಲನದ ಮತ್ತು ಸೂಕ್ತವಲ್ಲದ ಸಮಾಜದ ಅಭಿವೃದ್ಧಿ ಇಂದು ಉಂಟುಮಾಡಿದೆ. ಈ ಅರಿವಿನ ವಿತರಣೆ, ಅರಿವಿನ ಲಭ್ಯತೆಯಲ್ಲಿನ, ಅರಿವು ಹಂಚಿಕೊಳ್ಳುವುದರಲ್ಲಿನ ಅಸಮತೋಲನವು ಮಾನವ ಸಮಾಜದ ಆರ್ಥಿಕ/ಸಾಂಸ್ಕೃತಿಕ/ಸಾಮಾಜಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಅರಿವು ಸಮಾಜಗಳು ಮೊದಲು ಅರಿವಿನ ಪ್ರಾಮುಖ್ಯತೆಯನ್ನು ಮತ್ತು ಸರಿಯಾದ ಅರಿವಿನ ವಿತರಣೆ, ಹಂಚಿಕೆ ಮತ್ತು ಸಾಮಾಜಿಕ ಅಭಿವೃದ್ಧಿಯ ನಿರ್ಮಾಣದ ಪ್ರಾಮುಖ್ಯತೆ ಅರ್ಥಮಾಡಿಕೊಳ್ಳಬೇಕು.

ಸ್ವಭಾವದ ಅರಿವು ಮುಕ್ತವಾಗಿದೆ. ಸಮಾಜದ ಒಳ್ಳೆಯ ಅನುಕೂಲಕ್ಕಾಗಿ ಅದು ಸ್ವತಂತ್ರ ಆಗಬೇಕಿದೆ. ಉತ್ತಮ ಅಭಿವೃದ್ಧಿ ಮತ್ತು ಅರಿವಿಗೆ ನಿರ್ದಿಷ್ಟ ರೂಪಕೊಡಲು ಅದು ನಿರ್ಬಂಧರಹಿತವಾಗಿರತಕ್ಕದ್ದು. ಅರಿವಿನ ಸ್ವತಂತ್ರಗೊಳಿಸುವಿಕೆ ಅರಿವು ನಿರ್ಮಾಣಕ್ಕೆ ಬೇಕಾದ ಪ್ರೇರಣೆಯನ್ನು ಸಂಹರಿಸುತ್ತದೆ ಎಂಬ ವಾದವನ್ನು/ಟೀಕೆಯನ್ನು ನೇರವಾಗಿ ತಿಳಿಸಬೇಕು.

**1.** ಅರಿವು ಸಮಾಜವು ______________

(A) ಬಹು ಶಿಸ್ತಿನ ಅರಿವು ಉತ್ಪಾದಿಸುತ್ತದೆ

(B) ಮಾಹಿತಿ ತಂತ್ರಜ್ಞಾನ ಉಪಯೋಗಿಸುತ್ತದೆ

(C) ಕಲಿಕೆಗೆ ಒತ್ತುಕೊಡುತ್ತದೆ

(D) ಸಂಪನ್ಮೂಲವಾಗಿ ಅರಿವನ್ನು ಉಪಯೋಗಿಸುತ್ತದೆ

Prepp
Your Personal Exams Guide

Total Number of Pages : 24

# GENERAL PAPER
## Paper – I

**Note :** This paper contains **Sixty (60)** multiple choice questions. **Each** question carrying **two (2)** marks.
Candidate is expected to answer any **Fifty (50)** questions.
In case more than **Fifty (50)** questions are attempted, only the **first Fifty (50)** questions will be evaluated.

Read the following passage carefully and answer the questions **1** to **6** :

A knowledge society is a formal association of people with similar interests, who try to make effective use of their combined knowledge about their areas of interest, and in the process contribute to this knowledge. In this sense, <u>knowledge</u> is the psychological and useful result of perception, learning, and reasoning.

Knowledge societies have the characteristic that knowledge forms the major component of any activity, particularly economic activities. Economic, social, cultural, and all other human activities become dependent on a huge volume of knowledge and information. A knowledge society/economy is one in which knowledge becomes a major product and raw material.

Knowledge societies are not a new occurrence. For example, fishermen have long shared the knowledge of predicting the weather to their community, and this knowledge gets added to the social capital of the community. What is new is that with current technologies, knowledge societies need not be constrained by geographic proximity. Current technology offers much more possibilities for sharing, archiving, and retrieving knowledge. Knowledge has become the most important capital in the present age, and hence the success of any society lies in harnessing it.

Knowledge and information are vital components of the formation of any society because every society is formed around some shared concepts. One of the contributions of Globalisation and new ICT is creation of a global society with a shared knowledge of issues and possibilities.

In the same way, as the unequal distribution of materials (wealth in generalised term) caused unbalanced and inappropriate development of society to date, imbalances in the knowledge distribution, knowledge availability, knowledge sharing, etc., hinder the economic/cultural/social development of human societies. The knowledge societies first realise the importance of knowledge and also the importance of proper knowledge distribution, sharing and building for social development.

Knowledge by nature is free. It should be free for better benefit of society. It should be free for better development and crystallisation of knowledge. The argument that freeing knowledge kills motivation for creating knowledge should be addressed.

**1.** A knowledge society is one which

(A) Produces multi-disciplinary knowledge

(B) Uses information technology

(C) Emphasizes learning

(D) Uses knowledge as resource

**2.** ಈ ಪ್ಯಾಸೇಜ್ ಪ್ರಕಾರ, ಅರಿವು ಸಮಾಜ ಒಂದು ______________

(A) ಚಾರಿತ್ರಿಕವಾಗಿ ವಿಕಸನಗೊಂಡ ಸಂಸ್ಥೆ
(B) ಸ್ವಾಭಾವಿಕ ವಿದ್ಯಮಾನ
(C) ಬುದ್ಧಿಪೂರ್ವಕ ಸೃಷ್ಟಿ
(D) ಗತಕಾಲದ ವಿರುದ್ಧ ಒಂದು ಪ್ರತಿಕ್ರಿಯೆ

**3.** ಆಧುನಿಕ ಅರಿವು ಸಮಾಜಕ್ಕೆ ______________ ನ ಅಗತ್ಯವಿಲ್ಲ.

(A) ಮಾಹಿತಿ ತಂತ್ರಜ್ಞಾನ
(B) ವಿವಿಧ ಅರಿವಿನ ಹಿನ್ನೆಲೆಯುಳ್ಳ ಜನರು
(C) ಹತ್ತಿರ ಹತ್ತಿರ ವಾಸಿಸುವ ಜನರು
(D) ಅರಿವಿನ ಬೆಳವಣಿಗೆ

**4.** ಈ ಪ್ಯಾಸೇಜ್ ಪ್ರಕಾರ ಜಾಗತೀಕರಣವು ______________

(A) ಅರಿವಿನ ಹಂಚುವಿಕೆಗೆ ಸಹಕಾರಿ ಆಗಿದೆ
(B) ಅರಿವು ಸಮಾಜಕ್ಕೆ ಹಾನಿಕರವಾದುದು
(C) ಅರಿವು ಸಮಾಜದಲ್ಲಿ ಅಸಮಾನತೆ ಸೃಷ್ಟಿಸುತ್ತದೆ
(D) ಅಂಕೀಯ ವಿಭಾಗವಾಗುವುದಕ್ಕೆ ದಾರಿ ಮಾಡುತ್ತದೆ

**5.** ಲೇಖಕನು ______________ ಅಗತ್ಯವೆಂದು ಕಂಡುಕೊಂಡಿದ್ದಾನೆ.

(A) ಅರಿವಿನ ಸ್ವಭಾವವನ್ನು ವ್ಯಾಖ್ಯಾನಿಸುವುದು
(B) ಅರಿವನ್ನು ಬಂಧನರಹಿತ (ಸ್ವತಂತ್ರ) ಗೊಳಿಸುವುದರಿಂದಾಗುವ ಲಾಭಗಳನ್ನು ಪರೀಕ್ಷಿಸುವುದು
(C) ಸ್ವಾತಂತ್ರ್ಯ ಮತ್ತು ಪ್ರೇರಣೆಯ ನಡುವಿನ ಸಂಬಂಧವನ್ನು ವಿಶ್ಲೇಷಿಸುವುದು
(D) ಸ್ವತಂತ್ರ ಅರಿವಿನ ಅಪಾಯಗಳನ್ನು ಅರ್ಥಮಾಡಿಕೊಳ್ಳುವುದು

**6.** ಈ ಪ್ಯಾಸೇಜು ಅರಿವನ್ನು ಚಾಲಕಶಕ್ತಿಯಾಗಿ ಬಳಸತಕ್ಕದ್ದು ಎಂದು ಹೇಳುತ್ತದೆ. ಏಕೆಂದರೆ ______________

(A) ಇದು ಶಕ್ತಿಯಿಂದ ಕೂಡಿ ಅಪಾಯಕಾರಿಯಾಗಿದೆ
(B) ಇದು ಈಗ ನಮ್ಮ ಅತಿ ಮುಖ್ಯವಾದ ಸಂಪನ್ಮೂಲ
(C) ಇದು ವಿನಾಶದ ಬೆದರಿಕೆಯ ಅಡಿಯಲ್ಲಿದೆ
(D) ಇದು ಒಂದು ಮಾನವನ ಅವಶ್ಯಕತೆ

**7.** ಜನವರಿ 12, 1980ರಂದು ಭಾನುವಾರ. ಆದರೆ ಜನವರಿ 14, 1981 ವಾರದ ಯಾವ ದಿನ ?

(A) ಶನಿವಾರ
(B) ರವಿವಾರ
(C) ಸೋಮವಾರ
(D) ಮಂಗಳವಾರ

**8.** ಒಂದು ವೃತ್ತದ ತ್ರಿಜ್ಯವನ್ನು 1% ಹೆಚ್ಚಿಸಲಾಯಿತು. ಆಗ ಅದರ ವಿಸ್ತೀರ್ಣದಲ್ಲಾದ ಪ್ರತಿಶತ ಹೆಚ್ಚಳ ಎಷ್ಟು ?

(A) 1 (B) 2
(C) 2.01 (D) 1.01

**9.** A ಯ ಮಗ E ಮತ್ತು B ಯ ಮಗ D. A ಯ ಮಗಳು C ಯು D ಯನ್ನು ವಿವಾಹವಾಗಿದ್ದಾಳೆ. D ಯು E ಗೆ ಯಾವ ಸಂಬಂಧ ಹೊಂದಿದ್ದಾನೆ ?

(A) ಸಹೋದರ
(B) ಬಾವ
(C) ಮಾವ
(D) ತಂದೆ

**10.** ಭೂಮಿಯನ್ನು ಆಹಾರ ಎಂದು ಕರೆದರೆ, ಆಹಾರವನ್ನು ಮರ ಎಂದು ಕರೆದರೆ, ಮರವನ್ನು ನೀರು ಎಂದು ಕರೆದರೆ, ನೀರನ್ನು ಪ್ರಪಂಚ ಎಂದು ಕರೆದರೆ, ಕೆಳಗಿನ ಯಾವುದು ಸೇಬು (ಆ್ಯಪಲ್)ನ್ನು ಬೆಳೆಸುತ್ತದೆ ?

(A) ಭೂಮಿ
(B) ಆಹಾರ
(C) ನೀರು
(D) ಪ್ರಪಂಚ

**11.** KSET 2011 ನ್ನು ಸಂಕೇತ ಬಳಸಿ LUHX 3122 ಎಂದು ಬರೆದರೆ TREE 4233 ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) UTHH 5344
(B) TUHH 4122
(C) HHTU 4122
(D) THHU 5344

**2.** According to the passage a knowledge society is

(A) An historically evolved institution

(B) A natural phenomenon

(C) Consciously created

(D) A reaction against to past

**3.** A modern knowledge society does not require

(A) Information technology

(B) People from various knowledge backgrounds

(C) People who live close to one another

(D) Growth of knowledge

**4.** According to the passage globalisation

(A) Is conducive to sharing knowledge

(B) Is inimical to knowledge society

(C) Creates inequality in knowledge society

(D) Leads to the digital divide

**5.** The writer finds it necessary to

(A) Define the nature of knowledge

(B) Examine the benefits of freeing knowledge

(C) Analyse the relationship between freedom and motivation

(D) Understand the dangers of free knowledge

**6.** The passage says that we should harness knowledge because

(A) It is potentially dangerous

(B) It is our most important resource now

(C) It is under threat of extinction

(D) It is a human need

**7.** On January 12, 1980, it was Saturday. The day of the week on January 14, 1981 was

(A) Saturday

(B) Sunday

(C) Monday

(D) Tuesday

**8.** The radius of a circle was increased by 1%. The percentage increased in the area is

(A) 1

(B) 2

(C) 2.01

(D) 1.01

**9.** E is the son of A and D is the son of B. C is the daughter of A and is married to D. How D is related to E ?

(A) Brother

(B) Brother in law

(C) Uncle

(D) Father

**10.** If earth is called food – food is called tree, tree is called water, water is called world, which of the following grows apple ?

(A) Earth (B) Food

(C) Water (D) World

**11.** If KSET 2011 is coded as LUHX 3122 then how TREE 4233 will be coded ?

(A) UTHH 5344

(B) TUHH 4122

(C) HHTU 4122

(D) THHU 5344

**12.** 0, 2, 6, 12, 10, ..... ಈ ಶ್ರೇಣಿಯಲ್ಲಿ (ಸರಣಿಯಲ್ಲಿ) ಹತ್ತನೇ ಸಂಖ್ಯೆ ಯಾವುದು ?

(A) 70 (B) 80

(C) 90 (D) 100

**13.** "We are coming" ಎಂಬುದನ್ನು ಸಂಕೇತ ಬಳಸಿ ygctgeqokpi ಎಂದು ಬರೆದರೆ fcpigtcjgcf ನ್ನು ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) Danger ahead

(B) Eating meals

(C) Danger point

(D) Tigers ahead

**14.** ಕೆಳಗೆ ಕೊಟ್ಟ I ಮತ್ತು II ಹೇಳಿಕೆಗಳ ಬಳಿಕ ಒಂದು ನಿರ್ಧಾರ ಕೊಟ್ಟಿದೆ. ಹೇಳಿಕೆಗಳು ಸರಿಯಾಗಿದ್ದರೆ ಯಾವ ನಿರ್ಧಾರಕ್ಕೆ ಬರಬಹುದು ?

I : ಹೆಚ್ಚಿನ ಪದವೀಧರರು ಉದ್ಯೋಗ ಗಳಿಸುತ್ತಾರೆ.

II : ಅವನು ಒಬ್ಬ ಪದವೀಧರ.

**ನಿರ್ಧಾರ:**

ಅವನು ಉದ್ಯೋಗ ಗಳಿಸುತ್ತಾನೆ.

(A) ಖಂಡಿತ ಸರಿ

(B) ಖಂಡಿತ ತಪ್ಪು

(C) ಬಹುಶಃ ಸರಿ

(D) ಬಹುಶಃ ತಪ್ಪು

**15.** ಒಂದು ವಿಶ್ವವಿದ್ಯಾನಿಲಯ ಪಡೆದ ಯೋಜನೆ ಅನುದಾನಗಳ ಸರಾಸರಿ ರೂ. 5.56 ಕೋಟಿ ಆಗಿತ್ತು. ವಿಜ್ಞಾನ ವಿಭಾಗಗಳು ಮತ್ತು ಇತರ ವಿಭಾಗಗಳು ಪಡೆದ ಸರಾಸರಿ ಅನುದಾನ (ಕೋಟಿ ರೂಪಾಯಿಗಳಲ್ಲಿ) ಕ್ರಮವಾಗಿ 5.2 ಮತ್ತು 5.8 ಆಗಿತ್ತು ವಿಜ್ಞಾನ ವಿಭಾಗದ ಫಲಾನುಭವಿಗಳು ಪ್ರತಿಶತ ಎಷ್ಟು ?

(A) 40 (B) 60

(C) 50 (D) 70

**16.** ಒಂದು ಹೊಸ ಟೂತ್‌ಪೇಸ್ಟ್‌ನ ನಿರ್ವಹಣೆ ತಿಳಿಯಲು ಅಭಿಪ್ರಾಯ ಸಮೀಕ್ಷೆ ನಡೆಸಲಾಯಿತು. ಒಟ್ಟು 2878 ವ್ಯಕ್ತಿಗಳು ಭಾಗವಹಿಸಿದ್ದರು. ಅವರಲ್ಲಿ 1652 ಪುರುಷರು. 1226 ಮಂದಿ ಟೂತ್‌ಪೇಸ್ಟ್‌ಗೆ ವಿರುದ್ಧ ಮತ ನೀಡಿದರು. ಅವರಲ್ಲಿ 796 ಪುರುಷರಾಗಿದ್ದರು. 1510 ಮಂದಿ ಹೊಸ ಟೂತ್‌ಪೇಸ್ಟ್‌ನ ಪರವಾಗಿ ಮತ ನೀಡಿದರು.

41 ಮಹಿಳೆಯರು ತಮ್ಮ ಯಾವುದೇ ಅಭಿಪ್ರಾಯ ನೀಡಲಿಲ್ಲ. ಟೂತ್‌ಪೇಸ್ಟ್ ಮೆಚ್ಚಿದವರಲ್ಲಿ ಪುರುಷರು ಪ್ರತಿಶತ ____________ ಆಗಿದೆ.

(A) 60 (B) 65

(C) 55 (D) 50

**17.** ಹೋದ ವರ್ಷ ಕರ್ನಾಟಕದಲ್ಲಿ 4 ಪ್ರಧಾನ ಸರಕಾರಿ ಆಸ್ಪತ್ರೆಗಳಲ್ಲಿನ ಔಟ್‌ಡೋರ್ ಕ್ಲಿನಿಕ್‌ಗಳಿಗೆ ತಂದ ರೋಗಿಗಳಲ್ಲಿ ಹೆಚ್ಚು ಅಂದರೆ 45% ರಷ್ಟು ಕ್ಯಾನ್ಸರ್ ಇದ್ದವರೆಂದು ತಿಳಿದು ಬಂತು. ಬೆಂಗಳೂರು ನಗರದ ರೋಗಿಗಳಲ್ಲಿ ಕ್ಯಾನ್ಸರ್ ಇರುವವರ ಬಗ್ಗೆ ಏನು ಹೇಳಬಹುದು ?

(A) ಭಯ ಹುಟ್ಟಿಸುವಷ್ಟು ಹೆಚ್ಚು ಆಗಿರಬೇಕು

(B) 45% ಕ್ಕಿಂತ ಕಡಿಮೆಯಾಗಿರಬೇಕು

(C) 45% ಕ್ಕೆ ಸಮನಾಗಿರಬೇಕು

(D) ಸಿಂಧುವಾದ ನಿರ್ಧಾರಕ್ಕೆ ಬರಲು ಕೊಟ್ಟಿರುವ ದತ್ತಾಂಶ ಸಾಲದು

**18.** ಒಂದು ವಸ್ತುವಿನ ಬೆಲೆ ಮೊದಲು 25% ಇಳಿದು ಮತ್ತೆ $33\frac{1}{3}$% ಏರಿತು. ಬೆಲೆಯಲ್ಲಿನ ಹೆಚ್ಚಳ ಮೂಲಬೆಲೆಯೊಂದಿಗೆ ಹೋಲಿಸಿದಾಗ ಎಷ್ಟು ?

(A) $8\frac{1}{3}$%

(B) 0%

(C) $29\frac{1}{6}$%

(D) 33%

**12.** The tenth number in the following series :

0, 2, 6, 12, 10, .... is

(A) 70
(B) 80
(C) 90
(D) 100

**13.** If "We are coming" is coded as ygctgeqokpi what does fcpigtcjgcf stand for ?

(A) Danger ahead
(B) Eating meals
(C) Danger point
(D) Tigers ahead

**14.** Two statements I and II given below are followed by one conclusion suppose the statements are correct which conclusions can be drawn ?

I : Most graduates get jobs.

II : He is a graduate.

**Conclusion** :

He will get a job.

(A) Definitely true
(B) Definitely false
(C) Probably true
(D) Probably false

**15.** The average of the project grants received by a university was Rs. 5.56 crores. The average grants (in crores of rupees) received by the science departments and other departments were 5.2 and 5.8 respectively. What percentage of the beneficiaries were science departments ?

(A) 40
(B) 60
(C) 50
(D) 70

**16.** An opinion survey was conducted to know the preference of a new toothpaste. Totally, 2878 persons participated of which 1652 were males. 1226 persons voted against the toothpaste of which 796 were males. 1510 persons preferred the new toothpaste. 41 females were undecided in their opinion. The percentage of males among those preferring the toothpaste is

(A) 60
(B) 65
(C) 55
(D) 50

**17.** As high as 45% of the patients, brought to the outdoor clinics of 4 major state-run hospitals in Karnataka last year, were found to have cancer. What can be said about the incidence of cancer among the patients of Bangalore City ?

(A) Must be alarmingly high
(B) Must be less than 45%
(C) Must be equal to 45%
(D) The given data is insufficient to draw a valid conclusion

**18.** The price of a commodity first fell by 25% and then rose by $33\frac{1}{3}$%. What is the increase in price compared to the original price ?

(A) $8\frac{1}{3}$%
(B) 0%
(C) $29\frac{1}{6}$%
(D) 33%

Prepp
Your Personal Exams Guide



**(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)**

ಕೆಳಗಿನ ಪ್ಯಾಸೇಜನ್ನು ಲಕ್ಷ್ಯವಿಟ್ಟು ಓದಿ ಮತ್ತು **13** ರಿಂದ **18** ರವರೆಗಿನ ಪ್ರಶ್ನೆಗಳನ್ನು ಉತ್ತರಿಸಿ :

ಬ್ರಿಟಿಷ್ ಸಿಂಹಾಸನಕ್ಕೆ ವಾರಸುದಾರನಾದ ಯುವರಾಜ ಚಾರ್ಲ್ಸ್, ನಿಸರ್ಗವನ್ನು ಬದಲಾಯಿಸಲು ವಿಜ್ಞಾನವನ್ನು ಬಳಸುತ್ತಿರುವ ರೀತಿಯಿಂದ ತಾನು ಅಸಂತೋಷಗೊಂಡಿದ್ದೇನೆ ಎನ್ನುತ್ತಾ, ತಳಿವಿಜ್ಞಾನದ ಪ್ರಕಾರ ಮಾರ್ಪಡಿಸಿದ ಆಹಾರಗಳನ್ನು ಕಟುವಾಗಿ ಟೀಕಿಸುವ ಭಾಷಣ ಮಾಡಿದರು.

ಬಿಬಿಸಿ ಆಕಾಶವಾಣಿಯಲ್ಲಿ ಪ್ರಸಾರವಾದ ಈ ವರ್ಷದ ಉಪನ್ಯಾಸಗಳಲ್ಲಿ, ಜೈವಿಕ ರೈತನಾಗಿದ್ದ ಯುವರಾಜನು, ಸಸ್ಯಗಳ ಮತ್ತು ಪ್ರಾಣಿಗಳ ವಂಶವಾಹಿಗಳನ್ನು ಬದಲಾಯಿಸಲು ವಿಜ್ಞಾನವನ್ನು ಬಳಸುತ್ತಿರುವ ವಿಧಾನದ ವಿಷಯದಲ್ಲಿ ಅಸಂತೋಷಪಟ್ಟಿದ್ದೇವೆ ಎಂದು ತಿಳಿಸಿದ್ದಾರೆ. ತನ್ನ ಉಪನ್ಯಾಸದಲ್ಲಿ, ಜೈವಿಕ ವಿಕಸನದ ಕಾರ್ಯ ವಿಧಾನವು ವಂಶವಾಹಿಗಳ ಬದಲಾವಣೆ ಮಾಡುವಂತೆ, ಇರುವ ಪ್ರಕೃತಿಯನ್ನು ಬದಲಾಯಿಸಬೇಡಿ ಮತ್ತು ಪ್ರಕೃತಿಯ ವಿನ್ಯಾಸಗಳ ಜಾಣತನಕ್ಕೆ ಹೆಚ್ಚಿನ ಗೌರವ ತೋರಿಸಲು ಮಾನವರಿಗೆ ಕರೆ ಇತ್ತರು.

ತಳಿ ವಿಜ್ಞಾನ ಬಳಸಿ ಮಾರ್ಪಡಿಸಿದ ಆಹಾರಗಳನ್ನು ಜನ ಒಪ್ಪುತ್ತಿರುವ ವಿರುದ್ಧ ಯುವರಾಜರ ಟೀಕೆಯನ್ನು ಪರಿಸರೀಯ ಗುಂಪುಗಳು ಸ್ವಾಗತಿಸಿದರಾದರೂ, ಒಟ್ಟು ವಿಜ್ಞಾನದ ವಿರುದ್ಧ ಯುವರಾಜರ ದೃಷ್ಟಿಕೋನವಿದೆ ಎಂದು ಭಾವಿಸುವ ವಿಜ್ಞಾನಿಗಳಿಂದ ಟೀಕೆಯ ಕಿಡಿ ಹತ್ತಿಕೊಂಡಿದೆ. ಯುವರಾಜ ಚಾರ್ಲ್ಸ್ ತನ್ನ ಉಪನ್ಯಾಸದಲ್ಲಿ, ಸರ್ವೋತ್ಕೃಷ್ಟ ಸೃಷ್ಟಿಕರ್ತನ "ಮಾರ್ಗದರ್ಶಕ ಕೈ" ಯನ್ನು ಮನುಷ್ಯ ಒಪ್ಪಿಕೊಳ್ಳಬೇಕೆಂದು ತಾನು ನಂಬಿರುವುದಾಗಿ ಸ್ಪಷ್ಟಪಡಿಸಿದ್ದಾರೆ. ಮಾರ್ಗದರ್ಶಕ ಕೈಯ ಇರುವಿಕೆಯನ್ನು ಒಪ್ಪಿಕೊಳ್ಳಲು ಅಸಮರ್ಥನಾಗಿರುವುದರಿಂದಲೇ, ಪ್ರಕೃತಿಯನ್ನು ತಮ್ಮ ಸ್ವಂತ ಅನುಕೂಲಕ್ಕಾಗಿ ಸಂಯೋಜಿಸಬಹುದಾದ ವ್ಯವಸ್ಥೆ ಎಂಬುದಾಗಿ ಪರಿಗಣಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ. ನಮಗೆ ಇರುವ ಅದರ ಉಪಯುಕ್ತತೆಯನ್ನು ಲೆಕ್ಕಿಸದೆ, ಸ್ವಾಭಾವಿಕ (ನೈಸರ್ಗಿಕ) ಪ್ರಪಂಚಕ್ಕೆ ಗೌರವವನ್ನು ಪುನಃ ಶೋಧಿಸುವುದು ಮುಖ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಜಗತ್ತಿನ ಬಗ್ಗೆ ಯುವರಾಜರ ಅಭಿಪ್ರಾಯವನ್ನು ಸರಿಯಾಗಿ ಸಾಮಾನ್ಯವಾಗಿದೆ ಎಂದು ಭಾರತದಲ್ಲಿ ಪರಿಗಣಿಸಲಾಗುತ್ತದೆ ಆದರೆ ಪಶ್ಚಿಮದಲ್ಲಿ, ವೈಜ್ಞಾನಿಕ ಚಿಂತನೆ ಮತ್ತು ಮಾರುಕಟ್ಟೆಯ ಅಗತ್ಯತೆಗಳೇ ಶ್ರೇಷ್ಠವಾಗಿರುವಲ್ಲಿ, ಅವನ್ನು ತೀರ ವಿವಾದಾತ್ಮಕವಾಗಿ ನೋಡಲಾಗುತ್ತದೆ. ಭೂಮಿಯ ಪರಿಸರೀಯ ಗುಂಪು ಮಿತ್ರರ ನಿರ್ದೇಶಕ, ಶ್ರೀ ಚಾರ್ಲ್ಸ್ ಸೀಕ್ರೆಟ್, ಯುವರಾಜರ ಹೇಳಿಕೆಗಳು "ರಾಜಕಾರಣಿಗಳಿಗೆ ಮತ್ತು ವಾಣಿಜ್ಯ ಮುಖಂಡರಿಗೆ ಎಚ್ಚರಿಸುವ ಕರೆಯಾಗುವುದು" ಎಂದು ಹೇಳಿದ್ದಾರೆ.

ಆದರೆ ಇತರರು, ವೇಲ್ಸ್‌ನ ಯುವರಾಜನ, ಸಾರ್ವಜನಿಕ ಧೋರಣೆಯ ಕ್ಷೇತ್ರದೊಳಗಿನ ಆಕ್ರಮಣದ ಬಗ್ಗೆ ವಿಮರ್ಶಾನಿರತರಾಗಿದ್ದಾರೆ. "ಮನುಷ್ಯನು ಮನುಷ್ಯನನ್ನೆ ಅತಿಮುಖ್ಯ ಎಂದು ಪರಿಗಣಿಸಬೇಕು" ಎಂದು ಚಿಂತಕರ ಚಾವಡಿಯಾಗಿರುವ ಆರ್ಥಿಕ ವ್ಯವಹಾರಗಳ ಸಂಸ್ಥೆಯ ಜೂಲಿಯನ್ ಮೋರ್ರಿಸ್ ಹೇಳಿದ್ದಾರೆ. "ಪ್ರಕೃತಿಯ ಹುಚ್ಚಾಟವನ್ನೆಲ್ಲ ಸಹಿಸಿಕೊಳ್ಳುವವರೆಗೆ ನಾವು ಹೋಗಬೇಕೆಂದು ಯುವರಾಜರು ಯೋಚಿಸುತ್ತಾರಾ ?" ಎನ್ನುತ್ತ "ಕಳೆದ 100,000 ವರ್ಷಗಳಿಂದ ಮಾನವಕುಲ ಮಾಡಿದ ಪ್ರತಿಯೊಂದರ ಮೇಲೂ ಯುವರಾಜ ಚಾರ್ಲ್ಸ್ ಆಕ್ರಮಣ ಮಾಡುತ್ತಿದ್ದಾರೆ" ಎಂದರು. ಆದರೆ ಯುವರಾಜರ ಭಾಷಣದಿಂದ ಜೈವಿಕವಾಗಿ ಮಾರ್ಪಾಡಾಗುತ್ತಿರುವ ಆಹಾರಕ್ಕೆ ಹೆಚ್ಚುತ್ತಿರುವ ಬಾಯ್ದರೆ ವಿರೋಧ ವೃದ್ಧಿಸುತ್ತದೆ. ಆದಾಗ್ಯೂ, ಅವರ ಹೇಳಿಕೆಗಳು, ಅವರನ್ನು ಸರಕಾರದೊಂದಿಗಿನ ಘರ್ಷಣೆಯ ಮಾರ್ಗದ ಮೇಲೆ ಇರಿಸಿವೆ, ಇದು ಜೈವಿಕವಾಗಿ ಮಾರ್ಪಡಿಸಿದ ಆಹಾರಗಳಿಗೆ ಅನುಮತಿ ನೀಡಲು ಅನುಕಂಪ ತೋರಿಸುವಂತದ್ದಾಗಿದೆ ಆದರೆ ಸಾರ್ವಜನಿಕ ಅಭಿಪ್ರಾಯವು ಇದನ್ನು ನಿಧಾನಗೊಳಿಸಲು ಒತ್ತಾಯ ಮಾಡುತ್ತಿದೆ.

ಪ್ರಸಕ್ತ, ಬ್ರಿಟಿಷ್ ಬೃಹತ್ (ಸೂಪರ್) ಮಾರುಕಟ್ಟೆಗಳಲ್ಲಿ ಜೈವಿಕವಾಗಿ ಬದಲಾಯಿಸಿದ ಟೊಮೆಟೊಗಳಿಂದ ತಯಾರಿಸಿದ ಟೊಮೆಟೊ ಕಣಕದಂತಹ ಸಣ್ಣ ಸಂಖ್ಯೆಯ ಜೈವಿಕವಾಗಿ ಮಾರ್ಪಡಿಸಿದ ಆಹಾರ ಪದಾರ್ಥಗಳನ್ನು ಮಾರಲಾಗುತ್ತಿದೆ. ಸಾರ್ವಜನಿಕ ಕಾತುರಗಳು, ಜೈವಿಕವಾಗಿ ಮಾರ್ಪಡಿಸಿದ ಉತ್ಪನ್ನಗಳನ್ನು ದಾಸ್ತಾನು ಮಾಡುವುದಿಲ್ಲ ಎಂದು ಪ್ರಕಟಿಸು (ಘೋಷಿಸು) ವಂತೆ ಅನೇಕ ಸೂಪರ್ ಮಾರ್ಕೆಟ್ ಸರಣಿಗಳನ್ನು ಒತ್ತಾಯಿಸಿವೆ. ಬ್ರಿಟನ್‌ನಲ್ಲಿ ಜೈವಿಕವಾಗಿ ಮಾರ್ಪಡಿಸಿದ ಬೆಳೆಗಳನ್ನು ಪ್ರಯೋಗದ ಆಧಾರದ ಮೇಲೆ ಬೆಳೆಸಲಾಗುತ್ತಿದೆ ಆದರೆ ಹಿಂಬಾಲಿಸುತ್ತಿರುವ ಸಾರ್ವಜನಿಕ ವಿರೋಧಗಳಿಂದಾಗಿ ವಾಣಿಜ್ಯ ಮಟ್ಟದಲ್ಲಿ ಬೆಳೆಸಲಾಗುತ್ತಿಲ್ಲ.

www.prepp.in

Prepp
Your Personal Exams Guide



**(For Blind Candidates Only)**

Read the following passage carefully and answer the questions **13** to **18** :

Prince Charles, heir to the British throne has delivered a stinging criticism of genetically modified foods, saying he was unhappy with the way science was being used to alter nature.

In this year's Reith Lectures broadcast on BBC Radio, the Prince who is an organic farmer let it be known that he was unhappy with the way science was used to manipulate the genes of plants and animals. In his lecture, he called on human beings to "show greater respect for the genius of nature's designs," and "not to change what nature is, as we do when genetic manipulation seeks to transform the process of biological evolution".

The Prince's remarks over the acceptability of genetically modified foods have been welcomed by environmental groups but sparked criticism from scientists who feel that his views were against science as a whole. Prince Charles made it clear in his lecture that he believed that man should accept "the guiding hand" of a Supreme Creator. He said it was "because of this inability to accept the existence of a guiding hand that nature has come to be regarded as a system that can be engineered for our own convenience". He said it was important to "rediscover a reverence for the natural world, irrespective of its usefulness to our selves".

The Prince's view of the world would be considered fairly normal in India, but in the West where scientific rationality and the needs of the market are supreme they are seen as extremely controversial. Mr. Charles Secrett, Director of the environmental group Friends of the Earth, said the Prince's remarks would be a "wake up call to politicians and business leaders".

But others were critical of the Prince of Wales' foray into the area of public policy. "Man should consider man foremost", said Julian Morris of the Institute of Economic Affairs, a think-thank. "Does Prince Charles think we should go to the point where we are at the whim of nature ?" He added that Prince Charles was "attacking everything that has been done by mankind over the last 100,000 years". But the increasingly vocal opposition to genetically modified foods will be boosted by the Prince's speech. His remarks, however, also put him on a collision course with a government, which is sympathetic to allowing genetically modified foods but has been forced by public opinion to go slow.

At present only a small number of items of genetically modified foods such as tomato paste made from genetically altered tomatoes are sold in British supermarkets. Public anxieties have forced several supermarket chains to announce that they would not stock genetically modified products. Genetically modified crops are being grown on a trial basis in Britain but following public protests have not been planted commercially.

www.prepp.in

Prepp
Your Personal Exams Guide



ತನ್ನ ಭಾಷಣದಲ್ಲಿ ಯುವರಾಜ ಚಾರ್ಲ್ಸ್, ''ಮಾನವ ಜನಾಂಗವು ಸೃಷ್ಟಿಕರ್ತ ನಮ್ಮ ಮೇಲೆ ಇರಿಸಿದ ಪವಿತ್ರವಾದ ನಂಬಿಕೆಗೆ ತಕ್ಕಂತೆ ನಾವು ಜೀವಿಸಬೇಕಾದ ಅಗತ್ಯವಿದೆ'' ಎನ್ನುತ್ತ, ''ಅಕ್ಷರಶಃ ಏನನ್ನೂ ಪವಿತ್ರವಾಗಿರಿಸದೆ ಹೋದರೆ, ಈ ಇಡೀ ಪ್ರಪಂಚವನ್ನು ಶಕ್ತಿಯುತ ವಿನಾಶಕಾರೀ ಸುದೀರ್ಘ ಪರಿಣಾಮಗಳ ದೊಡ್ಡ ಜೀವಿಗಳ (ಜೀವನದ) ಪ್ರಯೋಗ ಶಾಲೆ ಎಂದು ಪರಿಗಣಿಸುವುದನ್ನು ಯಾವುದೂ ತಡೆಯಲಾರದು'' ಎಂದು ಎಚ್ಚರಿಸಿದ್ದಾರೆ.

**13.** ಯುವರಾಜ ಚಾರ್ಲ್ಸ್ ಜೈವಿಕವಾಗಿ ಮಾರ್ಪಡಿಸಿದ ಸರಕುಗಳನ್ನು ಟೀಕಿಸಿದನು ಏಕೆಂದರೆ
(A) ಅವು ಆರೋಗ್ಯಕ್ಕೆ ಹಾನಿಕರ
(B) ಅವು ಅಸಹಜವಾದವು
(C) ಅವು ಮಾಲಿನ್ಯವನ್ನು ಹರಡುತ್ತವೆ
(D) ಅವು ನಿಷೇಧಿಸುವಂತೆ ದುಬಾರಿ

**14.** ''ಪ್ರಕೃತಿಯ ವಿನ್ಯಾಸಗಳ ಅಸಾಧಾರಣ ಪ್ರತಿಭೆ'' ಏನನ್ನು ಉಲ್ಲೇಖಿಸುತ್ತದೆ ?
(A) ನೈಸರ್ಗಿಕ ಪ್ರಪಂಚದ ಅಂದಚಂದ
(B) ದೇವರ ಇಚ್ಛೆ
(C) ಪ್ರಕೃತಿಯ ನಿಯಮಗಳು
(D) ಪ್ರಕೃತಿಯ ಜಂತು (ಜೀವಿ)ಗಳ ಬುದ್ಧಿವಂತಿಕೆ

**15.** ಜೈವಿಕ ಮಾರ್ಪಾಟುಗಳನ್ನು (ಕುತಂತ್ರ, ಕೈಚಳಕಗಳನ್ನು) ಯುವರಾಜ ಚಾರ್ಲ್ಸ್ ಏಕೆ ವಿರೋಧಿಸುತ್ತಾರೆ ?
(A) ಏಕೆಂದರೆ ಇದು ಅನೈತಿಕವಾಗಿದೆ
(B) ಏಕೆಂದರೆ ಇದು ವಿಕಾಸದ ಪ್ರಕ್ರಿಯೆಯನ್ನು ಬದಲಿಸಲು ಪ್ರಯತ್ನಿಸುತ್ತದೆ
(C) ಏಕೆಂದರೆ ಇದು ಒಂದು ಪಾಪ
(D) ಏಕೆಂದರೆ ಇದು ವೈಜ್ಞಾನಿಕವಾಗಿ ಅನೂರ್ಜಿತವಾದದ್ದು (ಅಸಿಂಧುವಾದದ್ದು)

**16.** ಲೇಖಕನ ಪ್ರಕಾರ, ಪಾಶ್ಚಾತ್ಯ ಜೀವ – ದೃಷ್ಟಿಯು ಭಾರತೀಯಕ್ಕಿಂತ ಹೇಗೆ ಭಿನ್ನವಾಗಿದೆ ?
(A) ಇದು ಪ್ರಧಾನವಾಗಿ ತರ್ಕಬದ್ಧ (ವಿವೇಚನಾಶೀಲ)ವಾದುದು
(B) ಇದು ಅಧಾರ್ಮಿಕವಾದದ್ದು
(C) ಇದು ಹೆಚ್ಚು ಪ್ರಜಾಸತ್ತಾತ್ಮಕವಾದುದು
(D) ಇದು ಹೆಚ್ಚು ಆಧುನಿಕವಾದದ್ದು

**17.** ಜೈವಿಕವಾಗಿ ಮಾರ್ಪಡಿಸಿದ ಸರಕುಗಳ ಬಗ್ಗೆ ಸಾರ್ವಜನಿಕ ನಿಲುವು (ಮನೋಭಾವ) ಯಾವುದು ?
(A) ಅವುಗಳನ್ನು ಇಷ್ಟಪಟ್ಟು ಆರಿಸಿಕೊಳ್ಳುವುದು
(B) ಅವುಗಳನ್ನು ವಿರೋಧಿಸುವುದು
(C) ಅವುಗಳ ಬಗ್ಗೆ ನಿರ್ಧರಿಸಲು ಸರಕಾರಕ್ಕೆ ಅನುಮತಿ ಕೊಡುವುದು
(D) ಕಾದು ನೋಡುವುದು

**18.** ಇಡೀ ಜಗತ್ತನ್ನು ಒಂದು ಪ್ರಯೋಗ ಶಾಲೆ ಎಂದು ಪರಿಗಣಿಸುವುದರ ಪರಿಣಾಮಗಳು ಯಾವುವು ?
(A) ಈ ಜಗತ್ತನ್ನು ಅದು ನಾಶ ಪಡಿಸುತ್ತದೆ
(B) ಜನರ ವಾಸಕ್ಕೆ ಯೋಗ್ಯವಲ್ಲದುದನ್ನಾಗಿ ಮಾಡುತ್ತದೆ
(C) ಅದು ಪ್ರಪಂಚವನ್ನು ನಿಧಾನವಾಗಿ ಸುಧಾರಿಸುತ್ತದೆ
(D) ಪವಿತ್ರವಾದುದಕ್ಕೆ ಅದು ಅವಕಾಶವನ್ನೆ ಇಡುವುದಿಲ್ಲ

In his lecture Prince Charles said mankind needed to "live up to the sacred trust that has been placed in us by our Creator", and warned that "if literally nothing is held sacred anymore, what is there to prevent us from treating an entire world as some great laboratory of life with potentially disastrous long-term consequences ?"

**13.** Prince Charles criticised genetically modified goods because

(A) They are harmful to health

(B) They are unnatural

(C) They spread pollution

(D) They are forbiddingly costly

**14.** What does the "genius of nature's designs" refer to ?

(A) The beauty of the natural world

(B) The will of God

(C) The laws of nature

(D) The intelligence of creatures of nature

**15.** Why does Prince Charles oppose genetic manipulation ?

(A) Because it is unethical

(B) Because it tries to change the process of evolution

(C) Because it is a sin

(D) Because it is scientifically invalid

**16.** How is the Western life-view is different from the Indian, according to the writer ?

(A) It is predominantly rational

(B) It is irreligious

(C) It is more democratic

(D) It is more modern

**17.** What has been the public attitude to genetically modified goods ?

(A) To prefer them

(B) To oppose them

(C) To allow the government to decide on them

(D) To watch and wait

**18.** What are the consequences of treating the entire world as a laboratory ?

(A) It will destroy the world

(B) It will make it uninhabitable

(C) It will improve the world gradually

(D) It will leave no room for the sacred

Prepp
Your Personal Exams Guide



**19.** ವಿದ್ಯುನ್ಮಾನ ನಿಧಿಗಳ ವರ್ಗಾವಣೆ ವ್ಯವಸ್ಥೆಯು __________ ನ್ನು ಉಪಯೋಗಿಸುತ್ತದೆ.

(A) MICR

(B) ಮಾರ್ಕ್ ಸೆನ್ಸಿಂಗ್

(C) ಪೋರ್ಟ್-ಎ-ಪಂಚ್

(D) ಮೇಲಿನ ಯಾವುದೂ ಅಲ್ಲ

**20.** ಸೀರಿಯಲ್ ಎಕ್ಸೆಸ್ ಸ್ಟೋರೇಜ್‌ಗೆ ಮಾತ್ರ ಕೆಳಗಿನ ಯಾವುದನ್ನು ಉಪಯೋಗಿಸುತ್ತಾರೆ ?

(A) RAM

(B) ಮ್ಯಾಗ್ನೆಟಿಕ್ ಡಿಸ್ಕ್

(C) ಕೋರ್ ಮೆಮೊರಿ

(D) ಮ್ಯಾಗ್ನೆಟಿಕ್ ಟೇಪ್

**21.** ನೆರೆ ಹಾವಳಿ ನಿಯಂತ್ರಿಸುವ ರಾಚನಿಕವಲ್ಲದ ವಿಧಾನಗಳಲ್ಲಿ ಒಂದು _________ ಆಗಿದೆ.

(A) ಒದ್ದೆ ಜಮೀನುಗಳನ್ನು ನಿರ್ವಹಿಸುವುದು

(B) ಚರಂಡಿ ವ್ಯವಸ್ಥೆಯಲ್ಲಿ ಸುಧಾರಣೆ

(C) ಹರಿಯುವ ಸ್ಥಿತಿಗಳನ್ನು ಸುಧಾರಿಸುವುದು

(D) ಜಲಾಶಯಗಳ ನಿರ್ಮಾಣ

**22.** "ಪರಿಸರ ವ್ಯವಸ್ಥೆಯ ಜನರು" ಎಂಬುದಕ್ಕೆ ಕೆಳಗಿನ ಯಾರು ಉದಾಹರಣೆ ?

(A) ತೀವ್ರ ವ್ಯವಸಾಯದಲ್ಲಿ ನಿರತರಾದ ರೈತರು

(B) ರಫ್ತು ಮಾಡುವುದಕ್ಕಾಗಿ ಜೈವಿಕ ವ್ಯವಸಾಯ ವೃತ್ತಿ ಮಾಡುತ್ತಿರುವ ರೈತರು

(C) ಅರಣ್ಯದಿಂದ ಸಂಪನ್ಮೂಲಗಳನ್ನು ಸಂಗ್ರಹಿಸುವ ಬುಡಕಟ್ಟಿನವರು

(D) ಭಾರಿ ಉತ್ಪಾದನೆಯಲ್ಲಿ ತೊಡಗಿರುವ ಜಾನುವಾರು ಕ್ಷೇತ್ರ ಇಟ್ಟಿರುವವರು

**23.** ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ರಾಷ್ಟ್ರೀಯ ಪರಿಷತ್ತು MHRD ಯಿಂದ __________ ಗಾಗಿ ಸ್ಥಾಪಿತವಾಯಿತು.

(A) ದೇಶದಲ್ಲಿ ಉನ್ನತ ಶಿಕ್ಷಣದ ರಾಷ್ಟ್ರೀಯ ಮತ್ತು ಏಕರೂಪದ ವ್ಯವಸ್ಥೆ ಅಭಿವೃದ್ಧಿಪಡಿಸುವುದು

(B) ಉನ್ನತ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಪ್ರಮಾಣೀಕರಣದ ತುಲನಾತ್ಮಕ ಮಾನಕಗಳನ್ನು ಖಾತರಿಪಡಿಸುವುದು

(C) ರಾಷ್ಟ್ರೀಯ ಮೌಲ್ಯದ ಉನ್ನತ ಶಿಕ್ಷಣದಲ್ಲಿನ ಸಂಶೋಧನೆಯಲ್ಲಿ ತೊಡಗುವುದು

(D) ದೇಶದೆಲ್ಲೆಡೆ ಉನ್ನತ ಶಿಕ್ಷಣ ಸಂಸ್ಥೆಗಳ ನಿಯಮನ ಮತ್ತು ನಿಯಂತ್ರಣ

**24.** ಅಗತ್ಯಬಿದ್ದರೆ ರಜಾದಿನಗಳಲ್ಲಿ ಕೂಡ ಅಧ್ಯಾಪಕರು ಕರ್ತವ್ಯಕ್ಕೆ ಹಾಜರಾಗಲು ಒಂದು ಖಾಸಗಿ ಶಾಲೆ ಹೇಳುತ್ತದೆ. ರಜಾದಿನಗಳಿಗೆ ಕೂಡ ಅವರಿಗೆ ವೇತನ ನೀಡಲಾಗುತ್ತದೆ ಎನ್ನುತ್ತ ಈ ಕ್ರಿಯೆಯನ್ನು ಆಡಳಿತ ವರ್ಗ ಕೂಡ ಬೆಂಬಲಿಸುತ್ತದೆ. ಈ ಪರಿಸ್ಥಿತಿಯು ____________ ನ್ನು ಸೂಚಿಸುತ್ತದೆ.

(A) ವೃತ್ತಿಪರ ಪ್ರಮಾಣಕಗಳ ಕೊರತೆ

(B) ಅಧ್ಯಾಪಕರ ವೃತ್ತಿಪರ ಹಕ್ಕುಗಳಿಗೆ ಗೌರವದ ಕೊರತೆ

(C) ಅಧ್ಯಾಪಕರಲ್ಲಿ ಇದನ್ನು ನಿರಾಕರಿಸುವ ಇಚ್ಛೆಯ ಕೊರತೆ

(D) ಅಧ್ಯಾಪಕರ ದುರವಸ್ಥೆ ಬಗೆಗೆ ಆಡಳಿತ ವರ್ಗದ ನಿರಾಸಕ್ತಿ

**19.** Electronic funds transfer system make use of

(A) MICR

(B) Mark sensing

(C) Port-a-punch

(D) None of the above

**20.** Which of the following is used for serial access storage only ?

(A) RAM

(B) Magnetic disk

(C) Core memory

(D) Magnetic tape

**21.** One of the non structural methods for controlling flood damage is ________

(A) Maintaining wet lands

(B) Improved drainage

(C) Improving flow conditions

(D) Constructing reservoirs

**22.** Among the following which is an example of "Ecosystem people" ?

(A) Formers involved in intensive agriculture

(B) Formers practicing organic forming for export

(C) Tribals collecting resources from forests

(D) Cattle ranchers involved in mass production

**23.** National Council of Higher Education and Research is being set up by the MHRD to

(A) Develop a national and uniform system of higher education in the country

(B) Ensure comparable standards of certification in higher education and research

(C) Engage in research in higher education that is of national value

(D) To regulate and control higher education institutions all over the country

**24.** A private school asks teachers to attend duties if necessary even during holidays. Management supports this action by saying that they were being paid for their holidays too. This situation refers to

(A) Lack of professional standards

(B) Lack of respect for professional rights of teachers

(C) Lack of will on the part of teachers to refuse

(D) Apathy of management towards teacher's plight

**25.** ಅಪೆಕ್ಸ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಪ್ಲಾನಿಂಗ್ ಎಡ್ಮಿನಿಸ್ಟ್ರೇಶನ್ ಇನ್ ಇಂಡಿಯಾ ಇದರ ಸರಿಯಾದ ಸಂಕ್ಷಿಪ್ತರೂಪ ಯಾವುದು ?

(A) IIEPA

(B) NUEPA

(C) NIEPA

(D) IIEPAM

**26.** ____________ ಮಟ್ಟದಲ್ಲಿ ಭಾರತದಲ್ಲಿ ಖಾಸಗಿ ಉದ್ಯಮವು ಹೆಚ್ಚು ಪ್ರಖ್ಯಾತವಾಗಿದೆ.

(A) ಶಾಲಾ ಶಿಕ್ಷಣ

(B) ಪದವಿಮಟ್ಟದ ಸಾಮಾನ್ಯ ಶಿಕ್ಷಣ

(C) ವೃತ್ತಿಪರ ಶಿಕ್ಷಣ

(D) ನರ್ಸರಿ ಶಿಕ್ಷಣ

**27.** ವೃತ್ತಿಪರ ಉನ್ನತ ಶಿಕ್ಷಣ ಅವಕಾಶಗಳಲ್ಲಿ ಮೀಸಲಾತಿಯನ್ನು ಭಾರತದಲ್ಲಿ ಅಂಗೀಕರಿಸಲಾಗಿದೆ. ಏಕೆಂದರೆ

(A) ದೇಶದ ರಾಜಕೀಯ ಗುಂಪುಗಳನ್ನು ಮೆಚ್ಚಿಸಲು ಇದು ಸಹಾಯಮಾಡುತ್ತದೆ

(B) ಸಮಾಜದ ಕೆಳಸ್ತರಕ್ಕೆ ಬದುಕಿನ ಉತ್ತಮ ಪ್ರಮಾಣಕವನ್ನು ಇದು ಸಾಧ್ಯವಾಗಿಸುತ್ತದೆ

(C) ಜನಸಮುದಾಯದ ಕೆಲವು ವಿಭಾಗದ ಸಾಮಾಜಿಕ ಮತ್ತು ಆರ್ಥಿಕ ತೊಂದರೆಗಳಿಗೆ ನಷ್ಟ ಭರ್ತಿ ಮಾಡುತ್ತದೆ

(D) ಇದು ಬಡಜನರಿಗೆ ಸರಕಾರದ ಬದ್ಧತೆಯನ್ನು ಪ್ರತಿಫಲಿಸುತ್ತದೆ

**28.** ಒಬ್ಬ ಅಧ್ಯಾಪಕನಲ್ಲಿರಬೇಕಾದ ಅತ್ಯಂತ ಮುಖ್ಯವಾದ ಗುಣ ಕೆಳಗಿನವುಗಳಲ್ಲಿ ಯಾವುದು ?

(A) ಸಮಯನಿಷ್ಠೆ

(B) ವಿಷಯಗಳ ಮೇಲಿನ ಪ್ರಭುತ್ವ

(C) ವಿಷಯಗಳ ಮೇಲೆ ಪ್ರಭುತ್ವ ಮತ್ತು ಸಂವಹನ ಸಾಮರ್ಥ್ಯ

(D) ಸಂಗಾಸಕ್ತಿ/ ಸ್ನೇಹಪರತೆ

**29.** ಕರ್ರಿಕುಲಮ್ ಅಂದರೆ

(A) ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳನ್ನು ಪ್ರಭಾವಕ್ಕೆ ಒಳಪಡಿಸುವ ಎಲ್ಲ ಅನುಭವಗಳು

(B) ವ್ಯಾಸಂಗ ವಿಭಾಗದಿಂದ/ ಬೋಧನಾಂಗದಿಂದ ವ್ಯವಹರಿಸಲ್ಪಡುವ ವಿಷಯಗಳು

(C) ಕೋರ್ಸ್‌ಗೆ ನಿಗದಿಪಡಿಸಿದ ಪಠ್ಯಕ್ರಮ

(D) ತರಗತಿ ಕೊಠಡಿ ಅನುಭವಗಳು, ಕ್ರೀಡೆಗಳು ಮತ್ತು ಆಟಗಳು

**30.** ಕಲಿಸುವಿಕೆ–ಕಲಿಕೆಯಲ್ಲಿ ಯಾವುದೇ ವಿಧದ ತಂತ್ರಜ್ಞಾನವನ್ನು ಸಂಯೋಜನೆಗೊಳಿಸುವುದು ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಹೆಚ್ಚಿಸುತ್ತದೆ – ಏಕೆಂದರೆ

(A) ಪಾಠದ ಕೊಠಡಿಯ ಅವಶ್ಯಕತೆಗಳನ್ನು ತಿಳಿದು ಅಧ್ಯಾಪಕನು ತಂತ್ರಜ್ಞಾನವನ್ನು ಉಪಯೋಗಿಸುತ್ತಾನೆ

(B) ತಂತ್ರಜ್ಞಾನವನ್ನು ಸಂಕಲಿಸಿ ಸೂಕ್ತ ಬೋಧನೆಯ ಯೋಜನೆಯನ್ನು ಅಭಿವೃದ್ಧಿ ಪಡಿಸಲಾಗುತ್ತದೆ

(C) ಕಲಿಯುವವರ ವೈಯಕ್ತಿಕ ಭಿನ್ನತೆಗೆ ತಂತ್ರಜ್ಞಾನದ ಉಪಯೋಗವು ಸೌಕರ್ಯ ಒದಗಿಸುತ್ತದೆ

(D) ಮೇಲಿನ ಎಲ್ಲವೂ

**31.** ವಿದ್ಯಾರ್ಥಿಯು ಹೊಂದಿರಬೇಕಾದ ಅತ್ಯಂತ ಮುಖ್ಯವಾದ ಮತ್ತು ಅಗತ್ಯವಾದ ಲಕ್ಷಣಗಳು

(A) ಕಲಿಯಲು ಸ್ವ–ಪ್ರಚೋದನೆ

(B) ಸೋಲುಗಳೊಂದಿಗೆ ತಾಳ್ಮೆ

(C) ವಿಷಯಗಳನ್ನು ಬಾಯಿ ಪಾಠ ಮಾಡಲು ಸಾಮರ್ಥ್ಯ

(D) ಪರೀಕ್ಷೆಗೆ ಸಿದ್ಧತೆ (ತಯಾರಿ) ಮಾಡುವುದು

**25.** Which is the correct abbreviation for the apex institute of educational planning administration in India ?

(A) IIEPA

(B) NUEPA

(C) NIEPA

(D) IIEPAM

**26.** Private enterprise is highly prominent in India at the level of

(A) School education

(B) Graduate level general education

(C) Professional education

(D) Nursery education

**27.** Reservation in professional higher education opportunities is adopted in India because

(A) It helps to please political groups of the country

(B) It enables lower strata of society for a better standard of living

(C) It compensates for social and economic handicaps of certain sections of the population

(D) It reflects the commitment of the government of the poor people

**28.** Which of the following is the most important quality for a teacher ?

(A) Punctuality

(B) Content mastery

(C) Content mastery and communication competency

(D) Sociability

**29.** Curriculum means

(A) All the experiences to which students get exposed in a college

(B) Subjects that are transacted by faculty

(C) Syllabus prescribed for the course

(D) Classroom experiences, sports and games

**30.** Integrating any kind of technology in teaching-learning automatically enhances the learning level of students because

(A) Teacher uses technology knowing the needs of classroom

(B) A suitable instructional plan is developed by integrating technology

(C) Use of technology caters to the individual differences of the learners

(D) All of the above

**31.** Most important and essential characteristics that student should possess

(A) Self-motivation to learn

(B) Patience with failures

(C) Ability to memorise subjects

(D) Prepare for examinations

**32.** ತಂತ್ರಜ್ಞಾನದ ಬಳಕೆ ಬಗ್ಗೆ ತರಬೇತಿ ನೀಡಿದ್ದರೂ, ಕಲಿಸುವಾಗ ತಂತ್ರಜ್ಞಾನ ಬಳಸಲು ಮುಕ್ತವಾಗಿ ಅಧ್ಯಾಪಕ ಮುಂದೆ ಬರುತ್ತಿಲ್ಲ. ಈ ಸ್ಥಿತಿಗೆ ಕೆಳಗಿನ ಯಾವ ಸನ್ನಿವೇಶ ಕಾರಣ ?

(A) ವಿಶ್ವಾಸದ ಕೊರತೆ

(B) ಸೋಲಿನ ಭಯ

(C) ಸೌಕರ್ಯಗಳ ಕೊರತೆ

(D) ಮೇಲಿನ ಎಲ್ಲವೂ

**33.** ಕಾರ್ಯಸೂಚಿ ಹೊಂದಿರುವ (ಕಾರ್ಯಸೂಚಿ ಪ್ರಕಾರದ) ಬೋಧನೆಯು ಕೆಳಗಿನ ಯಾವ ಕಲಿಕೆಯ ತತ್ವವನ್ನು ಆಧರಿಸಿದೆ ?

(A) ಪ್ರಾಥಮಿಕ ಬಲಪಡಿಸುವಿಕೆ

(B) ಮಾಧ್ಯಮಿಕ ಬಲಪಡಿಸುವಿಕೆ

(C) ನಿರಂತರ ಬಲಪಡಿಸುವಿಕೆ

(D) ಕಾರ್ಯಕ್ರಮಗಳ ಮೇಲೆ ಆಧರಿಸಿದ ಬೋಧನೆ

**34.** ಸಮೂಹ ಸಂವಹನವು ______________ ನ್ನು ಸೂಚಿಸುತ್ತದೆ (ಪ್ರಸ್ತಾಪಿಸುತ್ತದೆ).

(A) ಸಣ್ಣ ಗುಂಪನ್ನು ತಲುಪುವುದು

(B) ರಾಜ್ಯದೊಳಗೆ ಸಂಪರ್ಕಿಸುವುದು

(C) ಸಣ್ಣ ಸಮುದಾಯದೊಂದಿಗೆ ಸಂಪರ್ಕಿಸುವುದು (ಸಂವಹನ ನಡೆಸುವುದು)

(D) ದೊಡ್ಡ ಮತ್ತು ಬಹು ವಿಧದ ಪ್ರೇಕ್ಷಕರೊಂದಿಗೆ ಜೊತೆಜೊತೆಯಾಗಿ/ಏಕಕಾಲದಲ್ಲಿ ಸಂವಹನ ನಡೆಸುವುದು

**35.** 'ಇನ್‌ಫೊಟೈನ್‌ಮೆಂಟ್' ಏನನ್ನು ಸೂಚಿಸುತ್ತದೆ ?

(A) ಪ್ರಧಾನ/ಪ್ರಬಲವಾದ ಮನೋರಂಜನೆ

(B) ಮಾಹಿತಿ ಉದ್ದೇಶಿತ ವಿಷಯ

(C) ಮಾಹಿತಿ ಮತ್ತು ಮನೋರಂಜನೆಯ ವಿಷಯ ಒಳಗೊಂಡಿರುವ

(D) ಸಾರ್ವಜನಿಕ ವಿಷಯಗಳು ಮತ್ತು ಸಮಸ್ಯೆಗಳು

**36.** ಪರಿಣಾಮಕಾರಿ ಸಂವಹನಕ್ಕೆ ಒಂದು ಮೂಲಘಟಕವು ______________ ಆಗಿದೆ.

(A) ಸಂದೇಶದ ಯೋಜನೆ

(B) ಆಕರ್ಷಕ ವ್ಯಕ್ತಿತ್ವ

(C) ಧ್ವನಿವರ್ಧಕದ ಬಳಕೆ

(D) ಸಂಪರ್ಕಿಸುವವನ ವಯಸ್ಸು

**37.** ಸಂವಹನ ವಾಹಿನಿ (ಮಾರ್ಗ) ___________ ನ್ನು ಸೂಚಿಸುತ್ತದೆ.

(A) ಬಳಸಿದ ಮಾಧ್ಯಮ

(B) ಸಂದೇಶದ ವಿಷಯ

(C) ಸಂದೇಶದಲ್ಲಿನ ಗದ್ದಲ

(D) ಸಂದೇಶದಲ್ಲಿನ ಸಿಗ್ನಲ್‌ಗಳು

**38.** ಅಂತರ್ ವೈಯಕ್ತಿಕ ಸಂವಹನ ಅಂದರೆ

(A) ಒಬ್ಬ ವ್ಯಕ್ತಿ ಇನ್ನೊಬ್ಬನೊಡನೆ ಸಂಪರ್ಕ ನಡೆಸಿದಾಗ

(B) ಇಬ್ಬರು ಒಂದು ಗುಂಪಿನೊಂದಿಗೆ ಪರಸ್ಪರ ಕಾರ್ಯ ನಡೆಸುವುದು

(C) ಒಬ್ಬ ವ್ಯಕ್ತಿ ತನ್ನೊಂದಿಗೇ ಸಂಪರ್ಕ ಏರಿಸಿಕೊಂಡಾಗ

(D) ಒಂದು ಮಾದರಿಯ ತರಗತಿ ಕೊಠಡಿ ಸಂವಹನ

**39.** ಮುಖ್ಯವಾಗಿ ______________ ಕ್ಷೇತ್ರದಲ್ಲಾದ ಅಭಿವೃದ್ಧಿಯಿಂದಾಗಿ 'ವಿಶ್ವಗ್ರಾಮ'ದ ಪರಿಕಲ್ಪನೆ ಸಮ್ಮತಿಗಳಿಸಿದೆ.

(A) ಸಮುದ್ರ ಸಾರಿಗೆ

(B) ಮುದ್ರಣ

(C) ಸಂವಹನ

(D) ವಾಯುಯಾನ

**32.** Inspite of providing training in use of technology, a teacher is not coming out freely to use technology while teaching which of the following situations are responsible for the status ?

(A) Lack of confidence

(B) Fear of failure

(C) Lack of facilities

(D) All of the above

**33.** Programmed instruction is based on the following principle of learning

(A) Primary reinforcement

(B) Secondary reinforcement

(C) Continuous reinforcement

(D) Instruction based on programmes

**34.** Mass Communication refers to

(A) Reaching a small group

(B) Communicating within a state

(C) Communicating with a small community

(D) Communicating with a huge and diverse audience simultaneously

**35.** 'Infotainment' indicates

(A) Predominant entertainment

(B) Information oriented content

(C) Combining information and entertainment content

(D) Public issues and problems

**36.** One of the primary components for effective communication is

(A) Planning the message

(B) Attractive personality

(C) Using of microphones

(D) The age of the communicator

**37.** In communication 'channel' refers to

(A) The medium employed

(B) Content of the message

(C) Noise in the message

(D) Signals in the message

**38.** Intrapersonal communication means

(A) When one person communicates with other

(B) Two people interacting with a group

(C) When a person communicates with himself

(D) A typical classroom communication

**39.** The concept of 'Global Village' gained acceptance mainly because of the developments in the field of

(A) Sea transport

(B) Printing

(C) Communication

(D) Aviation

**40.** A ಯಿಂದ D ವರೆಗೆ ಗುರುತಿಸಿದ ನಾಲ್ಕು ಪದಗಳಲ್ಲಿ, ಮೂರು ಸಮರೂಪಿಗಳಾಗಿದ್ದು ಒಂದು ಸಮರೂಪಿ ಅಲ್ಲ. ಸಮರೂಪಿ ಅಲ್ಲದ್ದನ್ನು ಕಂಡುಹಿಡಿಯಿರಿ.

(A) ಆಗಸ್ಟ್

(B) ಸೆಪ್ಟಂಬರ್

(C) ಅಕ್ಟೋಬರ್

(D) ನವಂಬರ್

**41.** ಕೆಳಗೆ ಅಪೂರ್ಣ ವಾಕ್ಯ ಕೊಟ್ಟಿದೆ. ಬಳಿಕ ನಾಲ್ಕು ಸಾಧ್ಯವಾಗುವ ಬದಲಿ ಆಯ್ಕೆಗಳನ್ನು ಕೊಟ್ಟಿದೆ. ಅತ್ಯಂತ ಸೂಕ್ತವಾದ ಆಯ್ಕೆಯಿಂದ ವಾಕ್ಯ ಪೂರ್ಣಗೊಳಿಸಿ.
ಬದುಕಿನಲ್ಲಿ ಯಶಸ್ಸನ್ನು ಗಳಿಸಲು ಒಬ್ಬನು________

(A) ತುಂಬ ಹಣ ಹೊಂದಿರಬೇಕು

(B) ಪ್ರಭಾವಿ ವ್ಯಕ್ತಿಗಳೊಂದಿಗೆ ಸಂಪರ್ಕ ಹೊಂದಿರಬೇಕು

(C) ಹಗಲು ರಾತ್ರಿ ಕಷ್ಟಪಟ್ಟು ದುಡಿಯಬೇಕು

(D) ಪ್ರಾಮಾಣಿಕ ಮತ್ತು ನಿಜವಾದ ವ್ಯಕ್ತಿಯಾಗಿರಬೇಕು

**42.** ಮೇಲ್ತುದಿಯಲ್ಲಿ ಕೊಟ್ಟ ಜೋಡಿ ಪದಗಳಿಗಿರುವ ಸಂಬಂಧವನ್ನೇ ಹೊಂದಿದ ಪದಗಳ ಜೋಡಿಯನ್ನು ಆರಿಸಿ :

| | | |
|---|---|---|
| **ಕೈಗವಸು (ಗ್ಲೊವ್)** | **:** | **ಕೈ** |
| (A) ಕುತ್ತಿಗೆ | : | ಕೋಲರ್ |
| (B) ಸೋಕ್ಸ್ | : | ಪಾದ |
| (C) ಟೈ | : | ಶರ್ಟ್ |
| (D) ಕೋಟ್ | : | ಪೋಕೆಟ್ |

**43.** ಒಂದು ಹಾಸ್ಟೆಲ್‌ನ 10 ಹುಡುಗರ ಸರಾಸರಿ ವಯಸ್ಸು 14 ವರ್ಷ. ಒಬ್ಬ ಹೊಸ ಹುಡುಗನ ದಾಖಲಾತಿಯಿಂದ ಸರಾಸರಿ ವಯಸ್ಸು 1 ವರ್ಷ ಕಡಿಮೆಯಾಯಿತು. ಹೊಸ ಹುಡುಗನ ವಯಸ್ಸೆಷ್ಟು ?

(A) 4 (B) 5

(C) 3 (D) 12

**44.** ಕೊಟ್ಟಿರುವ ಕೋಷ್ಟಕದಿಂದ 15 ಗ. ಮತ್ತು 29 ಗ. ನಡುವೆ ಪ್ರತಿವಾರ ಟಿ.ವಿ. ವೀಕ್ಷಿಸುವ ಮಹಿಳೆಯರ ಪ್ರತಿಶತವನ್ನು ಲೆಕ್ಕ ಹಾಕಿ.

| ಪ್ರತಿವಾರ ಟಿ.ವಿ. ವೀಕ್ಷಣೆ ಗಂಟೆಗಳಲ್ಲಿ | ಮನೆ ಮಹಿಳೆಯರ ಸಂಖ್ಯೆ |
|---|---|
| 5 – 9 | 19 |
| 10 – 14 | 35 |
| 15 – 19 | 66 |
| 20 – 24 | 81 |
| 25 – 29 | 48 |
| 30 – 34 | 33 |
| 35 – 39 | 18 |

(A) 60

(B) 50

(C) 65

(D) 70

**45.** 10 ಕ್ರಮಾನುಗತ ದಿನಗಳಲ್ಲಿ ಒಂದು ಪಟ್ಟಣದಲ್ಲಿ ಬಿದ್ದ ಮಳೆಯ ಪ್ರಮಾಣ (mm ಗಳಲ್ಲಿ ) ಕೆಳಗೆ ಕೊಟ್ಟಿದೆ.
9.5, 0.5, 6.8, 3.2, 4.8, 10.5, 86.2, 9.4, 1.2 ಮತ್ತು 1.0.
ಕೇಂದ್ರ ಒಲವಿನ ಅತ್ಯಂತ ಸೂಕ್ತವಾದ ಅಳತೆ ಯಾವುದು ?

(A) ಸರಾಸರಿ

(B) ಮಧ್ಯಕ

(C) ಮೋಡ್

(D) ಮೂರನೆ ಕ್ವಾರ್ಟೈಲ್

**40.** Among the four terms marked A – D, three terms are similar and one is dissimilar, find the one that is not similar.

(A) August

(B) September

(C) October

(D) November

**41.** Below an incomplete statement is followed by four possible alternative choices. Select the most appropriate that completes the statement.

In order to achieve success in life one should

(A) Have plenty of money

(B) Have contacts with influential persons

(C) Work hard day and night

(D) Be honest and sincere

**42.** Choose the pair of words which shows the same relationship as given at the top.

**Glove : Hand**

(A) Neck : Collar

(B) Socks : Feet

(C) Tie : Shirt

(D) Coat : Pocket

**43.** The average age of 10 boys in a hostel comes out to be 14. A new admission brought down their average age by one year. How old the new recruit must be ?

(A) 4 (B) 5

(C) 3 (D) 12

**44.** From the following table, compute the percentage of women watching television (TV) between 15H and 29H per week.

| Hours per week watching T.V. | Number of housewives |
|---|---|
| 5 – 9 | 19 |
| 10 – 14 | 35 |
| 15 – 19 | 66 |
| 20 – 24 | 81 |
| 25 – 29 | 48 |
| 30 – 34 | 33 |
| 35 – 39 | 18 |

(A) 60

(B) 50

(C) 65

(D) 70

**45.** The amounts of rainfall (in mm) in a town on 10 consecutive days are given below.

9.5, 0.5, 6.8, 3.2, 4.8, 10.5, 86.2, 9.4, 1.2 and 1.0.

The most appropriate measure of central tendency is

(A) Mean

(B) Median

(C) Mode

(D) Third quartile

46. ಒಂದು ಕಂಪೆನಿಯು ಒಂದು ಗ್ರಾಹಕ ಪರಾಮರ್ಶೆ ಮಾರ್ಗದರ್ಶಕವನ್ನು ಕ್ರಮವತ್ತಾಗಿ ಅಪ್‌ಡೇಟ್ ಮಾಡಿದೆ. ಮುದ್ರಿತ ದಾಖಲೆಗಳಲ್ಲಿ ಯಾವುದು ಅತ್ಯಂತ ಇತ್ತೀಚಿನದು ಎಂಬುದರ ಕುರಿತು ಕೆಲವು ಸಿಬ್ಬಂದಿಗಳಿಗೆ ಗೊಂದಲವಿದೆ. ಈ ಗೊಂದಲ ನಿವಾರಣೆಗೆ ಈ ಪರಾಮರ್ಶೆ ಮಾರ್ಗದರ್ಶಕದಲ್ಲಿ ಯಾವ ವಿಷಯವನ್ನು ಸೇರಿಸಬೇಕು ?

(A) ಮುದ್ರಣದ ದಿನಾಂಕ
(B) ಆವೃತ್ತಿ ಸಂಖ್ಯೆ
(C) ಲೇಖಕನ ಹೆಸರು
(D) ಕಾಪಿರೈಟ್ ಮಾಹಿತಿ (ಕೃತಿಸ್ವಾಮ್ಯ ಮಾಹಿತಿ)

47. ಸಾಮಾನ್ಯ ಕಾಗದದ ಚೂರಿನಿಂದ ನೇರವಾಗಿ ಕ್ಯಾರೆಕ್ಟರುಗಳನ್ನು ಓದಬಲ್ಲ ಇನ್‌ಪುಟ್ ಉಪಕರಣ (ಸಲಕರಣೆ )

(A) OCR
(B) OMR
(C) MSI
(D) POS

48. ಮಾಹಿತಿ ಸಮಗ್ರತೆ __________ ನ್ನು ಸೂಚಿಸುತ್ತದೆ.

(A) ಮಾಹಿತಿಯ ಏಕಾಂತತೆ
(B) ಮಾಹಿತಿಯ ಭದ್ರತೆ
(C) ಮಾಹಿತಿಯ ಸಿಂಧುತ್ವ
(D) ಮಾಹಿತಿಯ ಸರಳತೆ

49. ಹಬ್‌ಗಿಂತ ನೆಟ್‌ವರ್ಕ್‌ನಲ್ಲಿ ಆದ್ಯತೆಯಲ್ಲಿ ಸ್ವಿಚ್ಚನ್ನು ಏಕೆ ಉಪಯೋಗಿಸುತ್ತಾರೆ ?

(A) ನೆಟ್‌ವರ್ಕ್ ಸಂಚಾರ ಕಡಿಮೆ ಮಾಡಲು
(B) ಎಲ್ಲ ವೈರಸ್‌ಗಳ ಹರಡುವಿಕೆ ತಡೆಯಲು
(C) ಇಂಟರ್‌ನೆಟ್‌ಗೆ ಕಂಪ್ಯೂಟರನ್ನು ನೇರವಾಗಿ ಜೋಡಿಸಲು
(D) ವರ್ಕ್ ಸ್ಟೇಶನ್‌ನಲ್ಲಿ ಪಾಸ್‌ವರ್ಡ್ ಭದ್ರತೆಯನ್ನು ನಿರ್ವಹಿಸಲು

50. ಒಬ್ಬ ಸಂಶೋಧಕನು ಸಾಮಾನ್ಯವಾಗಿ __________ ಮಾಡುವುದನ್ನು ನಿರೀಕ್ಷಿಸಲಾಗುತ್ತದೆ.

(A) ಒಂದು ಕ್ಷೇತ್ರದಲ್ಲಿ ಅಸ್ತಿತ್ವದಲ್ಲಿರುವ ಸಾಹಿತ್ಯದ ಅಧ್ಯಯನ
(B) ಹೊಸ ತತ್ವಗಳನ್ನು, ಸಿದ್ಧಾಂತಗಳನ್ನು ಹುಟ್ಟಿಸುವುದು ಮತ್ತು ಊರ್ಜಿತಗೊಳಿಸುವುದು
(C) ಇತರರು ನೀಡಿದ ಅಭಿಪ್ರಾಯಗಳನ್ನು ಸಂಶ್ಲೇಷಿಸುವುದು
(D) ಒಂದು ಅಧ್ಯಯನದ ಫಲಿತಾಂಶದ ಮೌಲ್ಯಮಾಪನ ಮಾಡುವುದು

51. ಪಟ್ಟಿ – II ರೊಂದಿಗೆ ಪಟ್ಟಿ – I ನ್ನು ಹೊಂದಿಸಿ ಮತ್ತು ಕೆಳಗೆ ಕೊಟ್ಟ ಸಂಕೇತಗಳಿಂದ ಸರಿಯಾದ ಉತ್ತರ ಆಯ್ಕೆ ಮಾಡಿ.

| **ಪಟ್ಟಿ – I** | **ಪಟ್ಟಿ – II** |
|---|---|
| a) ಪ್ರಾಯೋಗಿಕ | i) ಬಾಹ್ಯ ಸಿಂಧುತ್ವ |
| b) ಚಾರಿತ್ರಿಕ | ii) ಸ್ಯಾಂಪ್ಲಿಂಗ್ |
| c) ತತ್ವಶಾಸ್ತ್ರದ | iii) ಗುಂಪುಗಳನ್ನು ಹೊಂದಿಸುವುದು |
| d) ವಿವರಣಾತ್ಮಕ | iv) ಸುಸಂಬದ್ಧತೆ |

| | **a** | **b** | **c** | **d** |
|---|---|---|---|---|
| (A) | iii | iv | ii | i |
| (B) | iv | iii | i | ii |
| (C) | iv | i | ii | iii |
| (D) | iii | i | iv | ii |

52. ಶ್ರೇಣೀಕೃತ ಸ್ಯಾಂಪ್ಲಿಂಗನ್ನು ಯಾವಾಗ ಅಂಗೀಕರಿಸಲಾಗುತ್ತದೆ ?

(A) ವಿಶ್ವವು ಸಮರೂಪದ್ದಾದಾಗ
(B) ವಿಶ್ವವು ವಿಜಾತೀಯದ್ದಾದಾಗ
(C) ಆಯ್ದ ಗುಂಪುಗಳ ಅಧ್ಯಯನ ಅಗತ್ಯವಾದಾಗ
(D) ವಿಶ್ವದ ಬಗ್ಗೆ ದತ್ತಾಂಶ (ಮಾಹಿತಿ) ಲಭ್ಯವಿಲ್ಲವಾದಾಗ

www.prepp.in

Prepp
Your Personal Exams Guide



**46.** A company regularly updates a user reference guide. Some staff are confused about which of the printed documents is the most current. What feature should be included in the reference guide to eliminate this confusion ?

(A) Date printed

(B) Version number

(C) Author's name

(D) Copyright information

**47.** An input device which can read characters directly from an ordinary piece of paper

(A) OCR

(B) OMR

(C) MSI

(D) POS

**48.** Data integrity refers to

(A) Privacy of data

(B) Security of data

(C) Validity of data

(D) Simplicity of data

**49.** Why would a switch be used in a network in preference to a hub ?

(A) To reduce network traffic

(B) To prevent the spread of all viruses

(C) To connect a computer directly to the Internet

(D) To manage password security at a workstation

**50.** A researcher is generally expected to

(A) Study the existing literature in a field

(B) Generate new principles, theories and validate

(C) Synthesize the ideas given by others

(D) Evaluate the findings of a study

**51.** Match List – I with List – II and select the correct answer from the code given below :

| List – I | List – II |
|---|---|
| a) Experimental | i) External validity |
| b) Historical | ii) Sampling |
| c) Philosophical | iii) Matching of groups |
| d) Descriptive | iv) Coherence |

| | a | b | c | d |
|---|---|---|---|---|
| (A) | iii | iv | ii | i |
| (B) | iv | iii | i | ii |
| (C) | iv | i | ii | iii |
| (D) | iii | i | iv | ii |

**52.** Stratified sampling is adopted when

(A) The universe is homogenous

(B) The universe is heterogenous

(C) Selected groups need to be studied

(D) Data about universe is not available

www.prepp.in

Prepp
Your Personal Exams Guide



**53.** ದತ್ತಾಂಶದ ಸಂಗ್ರಹ ಮತ್ತು ಸಂಸ್ಕರಣೆಗೆ 1, ಫಲಿತಾಂಶದ ಅರ್ಥ ವಿವರಣೆಗೆ 2, ಸಮಸ್ಯೆ ಗುರುತಿಸುವಿಕೆಗೆ 3, ಸಾರ್ವತ್ರೀಕರಣಕ್ಕೆ ತಲಪುವುದಕ್ಕೆ 4, ವರದಿ ತಯಾರಿಕೆಗೆ 5 ಮತ್ತು ಆಧಾರ ಕಲ್ಪನೆ ರೂಪಿಸುವುದಕ್ಕೆ 6 ಸಂಕೇತ ಕೊಟ್ಟಾಗ, ಸಂಕೇತ ಸಂಖ್ಯೆಗಳಲ್ಲಿ ವಿವರಣಾತ್ಮಕ ಸಂಶೋಧನೆಯ ಸರಿಯಾದ ಹಂತಗಳ ಸರಣಿ (ಅನುಕ್ರಮ) ಯಾವುದು ?

(A) 6, 3, 1, 2, 4, 5

(B) 6, 3, 1, 5, 2, 4

(C) 3, 6, 1, 5, 2, 4

(D) 3, 6, 1, 2, 4, 5

**54.** ಮಾನಕ ವಿಚಲನೆಗೆ 1, ವ್ಯಾಪ್ತಿಗೆ 2, ಕ್ವಾರ್ಟೈಲ್ ವಿಚಲನೆಗೆ 3, ಸರಾಸರಿ ವಿಚಲನೆಗೆ 4 ಸಂಕೇತ ಕೊಟ್ಟಾಗ, ವ್ಯತ್ಯಾಸನೀಯತೆಯ ಅಳತೆಗಳನ್ನು ಸಂಕೇತ ಸಂಖ್ಯೆ ಉಪಯೋಗಿಸಿ ಸರಣಿಯಲ್ಲಿ (ಕ್ರಮಾನುಗತವಾಗಿ) ಜೋಡಿಸಿ.

(A) 2, 4, 3, 1

(B) 2, 3, 4, 1

(C) 4, 3, 2, 1

(D) 4, 2, 3, 1

**55.** ಸಂಶೋಧಕನು ಮೂಲ ವಿಷಯದ (ಮೂಲ ದ್ರವ್ಯದ) ಅಧಿಕೃತತೆ ಮತ್ತು ಸಾಚಾತನದ ತನಿಖೆ ನಡೆಸಿದಾಗ ಅದನ್ನು _________ ಎಂದು ಕರೆಯುತ್ತಾರೆ.

(A) ಆಂತರಿಕ ವಿಮರ್ಶೆ

(B) ಬಾಹ್ಯ ವಿಮರ್ಶೆ

(C) ಆಂತರಿಕ ಮತ್ತು ಬಾಹ್ಯ ವಿಮರ್ಶೆ

(D) ಮೇಲಿನ ಯಾವುದೂ ಅಲ್ಲ

**56.** ಜೈವಿಕ ವಿಘಟನೀಯವಲ್ಲದ ತ್ಯಾಜ್ಯ ನಿವಾರಣೆಗೆ ಅತ್ಯುತ್ತಮ ಪರಿಹಾರಗಳಲ್ಲಿ ಒಂದು_________

(A) ಸುಟ್ಟುಬಿಡುವುದು

(B) ರಾಶಿ ಹಾಕುವುದು

(C) ಹುಗಿಯುವುದು

(D) ಪುನಃ ಬಳಸುವಂತೆ ಮಾಡುವುದು

**57.** ಭೂಕಂಪಗಳಿಗೆ ಸಂಬಂಧಿಸಿದ _____________ ರ ವಲಯದಲ್ಲಿ ಕರ್ನಾಟಕ ರಾಜ್ಯ ಇದೆ.

(A) I ಮತ್ತು IV

(B) II ಮತ್ತು III

(C) I ಮತ್ತು V

(D) IV ಮತ್ತು V

**58.** _________ ವಾಯು ಮಾಲಿನ್ಯದ ಒಂದು ಸೂಚಕವಾಗಿದೆ.

(A) ಆಲ್ಗೇ

(B) ಇಯೊಹೋರ್ನಿಯ

(C) ಅಣಬೆಗಳು

(D) ಕಲ್ಲುಹೂಗಳು

**59.** ಸೈನೈಡ್ ವಿಷಕ್ಕೆ ____________ ಒಂದು ಪ್ರತಿ ವಿಷವಾಗಿದೆ.

(A) ಸಲ್ಫೇಟ್

(B) ಪ್ಯಾರಾಸಿಟಮೋಲ್

(C) ಫ್ಲೋರೈಡ್

(D) ಥಯೊಸಲ್ಫೇಟ್

**60.** ''ಮಾತೃಭಾಷೆ ಬೋಧನಾ ಮಾಧ್ಯಮವಾಗಿರಬೇಕು'' ಈ ನಿರ್ಣಯ________ನಿಂದ ಅಂಗೀಕೃತವಾಯಿತು.

(A) ವೂಡ್ಸ್ ಡಿಸ್‌ಪ್ಯಾಚ್

(B) ವಾರ್ಧಾ ಸ್ಕೀಮ್

(C) ಹಾರ್ಟೋಗ್ ಕಮಿಟಿ

(D) ಮೆಕಾಲೇಸ್ ಮಿನಿಟ್

www.prepp.in



**53.** Which is the correct sequence of steps in descriptive research in code numbers if collection and processing of data stands for 1, interpretation of results is 2, identification of a problem is 3, arriving at generalisations is 4, drafting of the report is 5, and formulation of hypotheses is 6.

(A) 6, 3, 1, 2, 4, 5

(B) 6, 3, 1, 5, 2, 4

(C) 3, 6, 1, 5, 2, 4

(D) 3, 6, 1, 2, 4, 5

**54.** Arrange the following measures of variability in a sequence if standard deviation stands for 1, Range is 2, Quartile deviation is 3 and average deviation is 4.

(A) 2, 4, 3, 1

(B) 2, 3, 4, 1

(C) 4, 3, 2, 1

(D) 4, 2, 3, 1

**55.** When the researcher checks the genuineness and authenticity of the source material it is called

(A) Internal criticism

(B) External criticism

(C) Internal and external criticism

(D) None of the above

**56.** One of the best solutions to get rid of non-biodegradable waste is _________

(A) Burning

(B) Dumping

(C) Burying

(D) Recycling

**57.** Karnataka state falls in the seismic zone of _____________

(A) I and IV

(B) II and III

(C) I and V

(D) IV and V

**58.** An indicator of air pollution is _______

(A) Algae

(B) Eiohhornia

(C) Fungi

(D) Lichens

**59.** An antidote for cyanide poisoning

(A) Sulphate

(B) Paracetamol

(C) Fluoride

(D) Thiosulphate

**60.** "The medium of instruction should be the mother tongue" resolution was passed by

(A) Woods Despatch

(B) Wardha Scheme

(C) Hartog Committe

(D) Maculay's Minute

www.prepp.in



ಚಿತ್ತು ಬರಹಕ್ಕಾಗಿ ಸ್ಥಳ

Space for Rough Work